

ಒಂದಿಬ್ಬರು ನಿಂತಿದ್ದರೂ ಯಾರೂ ವೀರೇಶನಂತಿರಲಿಲ್ಲ. ಅವಿನಾಶ ಗೂಗಲ್ ಮ್ಯಾಪ್ ಹಾಕಿಕೊಂಡು ಗೆಳೆಯರೊಂದಿಗೆ ನೇರ ದಿಬ್ಬದತ್ತ ನಡೆದ. ಪ್ರವಾಸಿಗರು ವಿರಳವಿದ್ದರು. ಇವರು ದಿಬ್ಬದ ಬಳಿ ತಲುಪುವಾಗ ಶಾಲೆ ಮಕ್ಕಳ ಗುಂಪೊಂದು ದಿಬ್ಬ ಇಳಿಯುತ್ತಿತ್ತು. ಅವರು ಹೊರಟರೆ ಅಲ್ಲಿದ್ದಿದ್ದು ಇವರು ಮಾತ್ರ. ಅವಿನಾಶ ವೀರೇಶನಿಗೆ ಫೋನ್ ಮಾಡಿ ತಾವು ದಿಬ್ಬದ ಬಳಿ ಇರುವುದನ್ನು ತಿಳಿಸಿದ. ವೀರೇಶ ಅದಾಗಲೇ ಅಲ್ಲಿಗೆ ತಲುಪಿಯಾಗಿತ್ತು. ಇವರತ್ತ ಓಡು ನಡಿಗೆಯಲ್ಲಿ ಬಂದ. ಎಲ್ಲರನ್ನು ನೋಡುತ್ತ 'ಹಲೋ ಮಾಸ್ಟರ್ಸ್. ವೆಲ್ಕಂ ಟು ಅವರ್ ಹೆರಿಟೇಜ್ ಸಿಟಿ ಹಂಪಿ.' ಎಂದವನೆ